ನೆನಪಿಸಿಕೊಂಡಿದ್ದು ಹತ್ತನೇ ವಯಸ್ಸಿನಲ್ಲಿಯೇ ಅವರು ವ್ಯಕ್ತಪಡಿಸಿದ್ದ ಗುರಿಯನ್ನು. ಅದಕ್ಕಾಗಿ ಹದಿನೈದು ವರ್ಷ ಹುಡುಗ ಪಟ್ಟ ಪರಿಶ್ರಮ ಎಂಥದು ಎನ್ನುವುದು ರೇಸ್‌ನ ಸೂಕ್ಷ್ಮಗಳನ್ನು ಬಲ್ಲ ಎಲ್ಲರಿಗೂ ಗೊತ್ತಿದೆ.

ಫಾರ್ಮುಲಾ ಒನ್ ರೇಸ್‌ನಲ್ಲಿ 20ನೇ ಸ್ಥಾನಕ್ಕಿಂತ ಕೆಳಕ್ಕೆ ಕುಸಿದ ಮೇಲೆ ಮತ್ತೆ ಗೆಲ್ಲುವ ಮಟ್ಟ ತಲುಪುವುದು ತುಂಬಾ ಕಷ್ಟ. ಹ್ಯಾಮಿಲ್ಟನ್ ಅಂಥ ಸಾಧನೆಯನ್ನು ಮೂರು ಸಲ ಮಾಡಿದ್ದಾರೆ. ಇಂಗ್ಲೆಂಡ್‌ನ ಬೇರೆ ಯಾವ ಚಾಲಕನೂ ಮಾಡದ ಸಾಧನೆ ಇದು. ಸಾರ್ವಕಾಲಿಕ ಶ್ರೇಷ್ಠ ಫಾರ್ಮುಲಾ ಒನ್ ಚಾಲಕರ ಪಟ್ಟಿಯಲ್ಲಿ ವರ್ಷಗಳಿಂದ ಹೆಸರನ್ನು ಉಳಿಸಿಕೊಂಡು ಬಂದಿರುವ ಹ್ಯಾಮಿಲ್ಟನ್ ವಿಶ್ವದ ಸೆಲೆಬ್ರಿಟಿ. ಅವರು ಹಲ್ಲುಜ್ಜುವುದು ಹೇಗೆ ಎನ್ನುವುದರಿಂದ ಹಿಡಿದು ಅವರ ಮೈಮೇಲೆ ಏನೇನೆಲ್ಲ ಹಚ್ಚೆಗಳಿವೆ ಎನ್ನುವವರೆಗೆ; ಅವರ ಖರ್ಚು, ಆದಾಯದ ಹರವು ಎಂಥದು ಎನ್ನುವುದರಿಂದ ಹಿಡಿದು ಅವರ ಹಿಂದೆ ಬಿದ್ದ ಲಲನೆಯರ ಪಟ್ಟಿಯವರೆಗೆ ಅಸಂಖ್ಯ ಲೇಖನಗಳು ಪ್ರಕಟವಾಗಿವೆ.

'ನನಗೆ ನೆನಪಿದೆ. ಆಗಿನ್ನೂ ಹ್ಯಾಮಿಲ್ಟನ್‌ಗೆ ಎಂಟು ವರ್ಷ. ತುಂಬಾ ಸಣ್ಣಗಿನ ದೇಹ. ನಾಚಿಕೆಯ ಸ್ವಭಾವ. ಅಪ್ಪನ ನೆರಳಲ್ಲೇ ನಿಲ್ಲುತ್ತಿದ್ದ. ಏನೇ ಮಾತನಾಡುವ ಮುನ್ನ ಅಪ್ಪನ ಕಡೆಗೇ ನೋಡುತ್ತಿದ್ದ. ಕಾರ್ಟ್ ರೇಸಿಂಗ್‌ಗೆಂದು ಅನೇಕ ಹುಡುಗರು ಅಲ್ಲಿದ್ದರು. ತನ್ನ ಸ್ಪರ್ಧಿ ಯಾರೆಂದು ಬಲುಬೇಗ ಅವನು ಅಂದಾಜು ಮಾಡಿದ್ದ. ಥಟ್ಟನೆ ಎರಡು ತಿರುವುಗಳನ್ನು ತೆಗೆದುಕೊಂಡು, ಸ್ಪರ್ಧಿಯನ್ನು ಸೋಲಿಸುವಂತಹ ಕಠಿಣ ಸವಾಲಿನ ಹಾದಿ. ಅದನ್ನು ಅವನು ಎದುರಿಸಿದ ಆತ್ಮವಿಶ್ವಾಸ ಕಂಡು ನಾನು ಅದಾಗಲೇ ನಿಬ್ಬೆರಗಾಗಿದ್ದೆ. ಈಗ ಅವನು ವಿಶ್ವದ ಶ್ರೇಷ್ಠ ಫಾರ್ಮುಲಾ ಒನ್ ಚಾಲಕನಾಗಿರುವುದನ್ನು ನೋಡಿದರೆ ಹೆಮ್ಮೆ ಎನಿಸುತ್ತದೆ' ಎಂದು ಮೋಟರ್ ಸ್ಪೋರ್ಟ್ ಯುಕೆ ಅಧ್ಯಕ್ಷ ಡೇವಿಡ್ ರಿಚರ್ಡ್ಸ್, ಶೂಮಾಕರ್ ದಾಖಲೆಯನ್ನು ಹ್ಯಾಮಿಲ್ಟನ್ ಸರಿಗಟ್ಟುವ ಕೆಲವು ದಿನಗಳ ಮೊದಲಷ್ಟೇ ಹೇಳಿದ್ದರು.

ಫಾರ್ಮುಲಾ ಒನ್ ರೇಸ್‌ನ ಮೊದಲ ಕಪ್ಪು ಸ್ಪರ್ಧಿ ಹ್ಯಾಮಿಲ್ಟನ್. ಅದನ್ನು ಬಿಳಿಯರು ತಮ್ಮ ಸ್ವತ್ತು ಎಂದೇ ಭಾವಿಸಿದ್ದ ಕಾಲವೊಂದಿತ್ತು. 70 ವರ್ಷಗಳ ಇತಿಹಾಸದಲ್ಲಿ ಒತ್ತಡದ ಗೋಡೆಗಳನ್ನೆಲ್ಲ ದಾಟಿಕೊಂಡು ಕಪ್ಪು ಹುಡುಗ ಚಾಂಪಿಯನ್ ಆಗುವುದು ತಮಾಷೆಯ ವಿಷಯವಲ್ಲ. ಮೂರು ಸಲ ವಿಶ್ವ ಚಾಂಪಿಯನ್ ರೇಸರ್ ಆಗಿರುವ ಜಾಕಿ ಸ್ಟುವರ್ಟ್ ಮೋಟರ್ ಸ್ಪೋರ್ಟ್‌ನಲ್ಲಿ ಇರುವ ಜನಾಂಗೀಯ ತಾರತಮ್ಯ ತೊಲಗಬೇಕು ಎಂದು ಇತ್ತೀಚಿನವರೆಗೂ ಆಂದೋಲನ ನಡೆಸಿದ್ದರು. ಇಂಗ್ಲೆಂಡ್‌ನ ಬ್ರಿಸ್ಟೊಲ್‌ನಲ್ಲಿ ಪ್ರತಿಷ್ಠಾಪಿಸಿದ್ದ 17ನೇ ಶತಮಾನದ ಗುಲಾಮರ ಮಾಲೀಕನ ಪ್ರತಿಮೆಯನ್ನು ನಾಶಪಡಿಸಿ ಪ್ರತಿಭಟನಾಕಾರರು ದೊಡ್ಡ ದನಿಯೆತ್ತಿದ್ದರು. ಹ್ಯಾಮಿಲ್ಟನ್ ಬೇಗುದಿಯನ್ನು ಅರ್ಥ ಮಾಡಿಕೊಂಡ ಮರ್ಸಿಡೀಸ್ ಈ ಋತುವಿನುದ್ದಕ್ಕೂ ಕಪ್ಪು ಕಾರುಗಳನ್ನೇ ಬಳಸುವ ಸಾಂಕೇತಿಕ ನಿರ್ಣಯವೊಂದನ್ನು ತೆಗೆದುಕೊಂಡಿತ್ತು. 'ಕಪ್ಪು ಜೀವಗಳಿಗೂ ಬೆಲೆ ಇದೆ' ಎನ್ನುವುದು ಆ ಕಂಪನಿಯ ಧ್ಯೇಯವಾಕ್ಯ. ಫಾರ್ಮುಲಾ ಒನ್ ಕಾರನ್ನು ಮೊದಲ ಸಲ ಟೆಸ್ಟ್ ಡ್ರೈವ್‌ಗೆ ಒಯ್ದಿದ್ದ ಕಪ್ಪುವರ್ಣೀಯ ಎನಿಸಿಕೊಂಡಿರುವ ವಿಲ್ಲಿ ಟಿ. ರಿಬ್ಸ್ ಪ್ರಕಾರ 'ಹ್ಯಾಮಿಲ್ಟನ್ ಒಬ್ಬ ಬ್ಯಾಂಡ್ ಲೀಡರ್'.

ಕ್ರೋಧವನ್ನು ವಾಚ್ಯವಾಗಿಯೇ ಅನೇಕ ಸಲ ಹ್ಯಾಮಿಲ್ಟನ್ ಪ್ರದರ್ಶಿಸಿದ್ದಾರೆ. ತಮ್ಮದೇ ಪ್ರೈವೇಟ್ ಜೆಟ್ ಖರೀದಿಸಿ, ಗ್ಯಾಸ್–ಗಜ್ಲಿಂಗ್ ಸ್ಪರ್ಧೆಯಲ್ಲಿ ಪಾಲ್ಗೊಂಡ ಕಾರಣಕ್ಕೆ ಅವರನ್ನು ಕೆಲವರು ಹುಂಬ ಎಂದು ಟೀಕಿಸಿದ್ದರು. ವಿಲ್ಲಿ ಟಿ. ರಿಬ್ಸ್ ಹೇಳುವಂತೆ, 'ಕಪ್ಪು ಬಣ್ಣದವರು ಬಹುಸಂಖ್ಯಾತರ ದಮನದಿಂದ ಆಗೀಗ ಆರ್ತನಾದ ಹೊರಡಿಸುವುದು ಸಹಜ. ಹ್ಯಾಮಿಲ್ಟನ್ ತರುಣನಾಗಿದ್ದಾಗ ಅನೇಕ ಸಲ ಅಂತಹ ಆರ್ತನಾದಗಳನ್ನು ಹೊರಡಿಸಿದ್ದಾನೆ. ಹಾಗಂತ ಅವನು ತನ್ನ ಗುರಿಯಿಂದ ಎಂದಿಗೂ ವಿಚಲಿತನಾಗಿಲ್ಲ. ಬೇರೆ ದೇಶಕ್ಕೆ ಹೋಗಿ, ಅನುಮತಿ ಮೀರಿದ ವೇಗದಲ್ಲಿ ಕಾರನ್ನು ಓಡಿಸಿ ಅವನು ದಂಡ ಕಟ್ಟಿಬಂದಿದ್ದ. ಹಾಗೆಂದಮಾತ್ರಕ್ಕೆ ಫಾರ್ಮುಲಾ ಒನ್ ಸಾಧನೆಯ ಹಾದಿಯಲ್ಲಿ ಅವನು ಅರಳಿಸುತ್ತಾ ಬಂದಿರುವ ಹೂಗಳಿಗೆ ಅರ್ಥವಿಲ್ಲ ಎನ್ನಲಾದೀತೆ?'

2013ರಲ್ಲಿ ಸ್ಕೈಯಿಂಗ್ ಅಪಘಾತದಿಂದಾಗಿ ಶೂಮಾಕರ್ ಕೋಮಾಗೆ ಜಾರಿದರು. ತಮ್ಮ ದಾಖಲೆಯನ್ನು ತಮಗಿಂತ ಹದಿನಾರು ವರ್ಷ ಚಿಕ್ಕಪ್ರಾಯದ ಕಪ್ಪು ಹುಡುಗ ಸರಿಗಟ್ಟಿರುವ ಅರಿವು ಅವರಿಗೆ ಇದ್ದಿರಲಾರದು. ಭಾರತದ ಯೋಗ ಶಿಕ್ಷಕನನ್ನು ಕರೆದುಕೊಂಡು ಹೋಗಿ, ತಮ್ಮ ಮನೋಬಲ ಗಟ್ಟಿಗೊಳಿಸಿಕೊಳ್ಳಲು ಯತ್ನಿಸಿದ್ದವರು ಶೂಮಾಕರ್. ಆದರೆ, ಹ್ಯಾಮಿಲ್ಟನ್ ಮನೋಬಲ ಗಟ್ಟಿಗೊಂಡದ್ದು ಅಪ್ಪ ಕಿವಿಗೆ ಹಾಕಿದ್ದ ಕಪ್ಪುಜನರ ಕಥೆಗಳಿಂದ. ಬಿಳಿ ಅಮ್ಮನ ಮಡಿಲಿನಿಂದ ಕಪ್ಪು ಅಪ್ಪನ ನೆರಳಿಗೆ ಹೊರಳಿಕೊಂಡ ಬಾಲಕನೊಬ್ಬ, 'ನಾನು ಕಪ್ಪುವರ್ಣೀಯ' ಎಂದು ಘೋಷಿಸಿಕೊಂಡೇ ಸ್ಪರ್ಧಿಸಿ, ಸಾಧಿಸಿ ತೋರಿಸಿರುವುದು ಸಿನಿಮೀಯ.

91 ರೇಸುಗಳ ವಿಜಯದ ಮೂಲಕ ತನ್ನ ಅಪ್ಪನ ದಾಖಲೆ ಸರಿಗಟ್ಟಿದ ಹ್ಯಾಮಿಲ್ಟನ್‌ಗೆ ಮೈಕಲ್ ಶೂಮಾಕರ್ ಮಗ ಮಿಕ್ 'ಕ್ರ್ಯಾಷ್ ಹೆಲ್ಮೆಟ್' ಒಂದನ್ನು ಉಡುಗೊರೆಯಾಗಿ ಕೊಟ್ಟಿರುವುದನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು. ಕ್ರೀಡಾಸ್ಫೂರ್ತಿ ಎಂದರೆ ಇದು.

ಪ್ರತಿಕ್ರಿಯಿಸಿ: **feedback@sudha.co.in**

